ಮಧ್ಯಕಾಲೀನ ಸಂದರ್ಭಕ್ಕೆ ಬಂದರೆ ಬಾಬರನು ಹಿಂದೂಸ್ತಾನದ ಅತಿ ಶ್ರೇಷ್ಠ ಫಲವೆಂದನೆಂಬ ಪ್ರಸ್ತಾಪ ಬಾಬರ್‌ನಾಮಾದಲ್ಲಿ ಇದೆ. ಮುಂದುವರೆದು ಹೇಳುತ್ತಾನೆ ಅನೇಕರು ಮಾವನ್ನು ಕರಬೂಜಕ್ಕೆ ಹೋಲಿಸುತ್ತಾರೆ, ಆದರೆ ಈ ಎರಡಕ್ಕೂ ಹೋಲಿಕೆ ಸಾಧ್ಯವೆ ಇಲ್ಲ.. ಜನ ಮಾವನ್ನು ಹೇಗೆ ಬಳಸುತ್ತಾರೆ ಎಂಬ ಪ್ರಸ್ತಾಪವನ್ನು ಅವನು ಮಾಡಿದ್ದಾನೆ. ಮೊಗಲ್ ದೊರೆ ಅಕ್ಬರ್ ದರ್ಭಾಂಗದ ಬಯಲುಗಳಲ್ಲಿ ಒಂದು ಲಕ್ಷ ಮಾವನ್ನು ನೆಡಿಸಿದನೆಂಬ ಉಲ್ಲೇಖಗಳಿವೆ.

ಆಧುನಿಕ ಸಂದರ್ಭದಲ್ಲಿ ಅನೇಕ ಬರಹಗಾರರು ಮಾವನ್ನು ಕುರಿತು ಕಥೆ, ಕಾದಂಬರಿ, ಕವಿತೆಗಳನ್ನು ಬರೆದಿದ್ದಾರೆ. ಅಮಿತ್ ಚೌಧರಿ, ಇಂದಿರಾ ಗಣೇಶನ್, ಅನೀಸ್ ಸಲೀಮ್, ರಾಣಾ ದಾಸ್ ಗುಪ್ತಾ, ಮಲಯಾಳಿ ಕವಿ ಶಂಕರ್ ಕುರುಪ್ ಮುಂತಾದವರು ಮುಖ್ಯರಾದವರೆಂದು ರಾಧಿಕಾ ಒಬೆರಾಯ್ ಬರೆಯುತ್ತಾರೆ. 'ಇನ್ ಹೆರಿಟೆನ್ಸ್' ಕೃತಿ ಬರೆದ ಇಂದಿರಾ ಗಣೇಶನ್ ಹೂ ಬಿಟ್ಟ ಮಾವಿನ ಮರದ ಕೆಳಗೆ ನಡೆಯುವುದೆಂದರೆ ಸ್ವರ್ಗದ ಹಾದಿಯಲ್ಲಿ ನಡೆದಂತೆನ್ನಿಸುತ್ತದೆ ಎನ್ನುತ್ತಾರೆ. ಈ ನಡುವೆ ಈ ವರ್ಷದ ಮಾವು ನನ್ನೊಳಗೆ ಭಯ ಹುಟ್ಟಿಸಿದೆ. ಯುಗಾದಿಗೆಂದು ಊರಿಗೆ ಹೋದರೆ ಆಗಿನ್ನು ಹೂಗಳೆದ್ದು ಕೂತಿದ್ದವು. ಮಿಡಿಗೆ ಮುಖ ಮೈ ಮೂಡಿರಲಿಲ್ಲ. ಇದೇನು ಆಗಿ ಹೋಗುವ ಮಾತೆ ಎನ್ನಿಸಿತ್ತು. ಮೊದಲೆಲ್ಲ ಜೂನ್ ಮೊದಲ ವಾರದ ವೇಳೆಗೆ ಮಾವೆಂಬುದು ಮುಗಿದು ಮರಗಳು ವಿಷಾದ ಹೊದ್ದು ಸುಮ್ಮನೆ ನಿಲ್ಲುತ್ತಿದ್ದವು. ಅವಕ್ಕೆ ಸಂಭ್ರಮವೆಂಬುದು ನೆನಪು ಮತ್ತು ಕನಸಾಗಿ ಕಾಣುತ್ತಿತ್ತು. ಆದರೆ, ಈ ವರ್ಷ ಜುಲೈ ಮೊದಲ ವಾರದವರೆಗೂ ಕಾಯಿಗಳು ಮರದಲ್ಲಿದ್ದವು. ಊರಿಂದ ಬಂದಿದ್ದ ಅಮ್ಮ ತಂದಿದ್ದ ಬಾದಾಮಿ ಕಾಯಿಗಳು ನಿಧಾನಕ್ಕೆ ಹಣ್ಣಾಗತೊಡಗಿದವು. ಹಣ್ಣಾಗುವ ವೇಳೆಗೆ ಅರ್ಧಕ್ಕಿಂತ ಹೆಚ್ಚು ಭಾಗ ಕೊಳೆತವು. ಈ ಋತುವಿನಲ್ಲಿ ರಸಪುರಿ ಮಾವಿನ ಹಣ್ಣು ಸಿಗಲೇ ಇಲ್ಲ.

ಮಾವು ಮೊರಡಿಯಲ್ಲಿ ಬೆಳೆದರೆ ಚೆಂದವೆಂಬ ಮಾತಿದೆ. ಧಗೆ ಕಡಿಮೆಯಾಗುವುದರೊಳಗೆ ಮಾವಿನ ಋತು ಮುಗಿಯಬೇಕು. ಪಾಕಕ್ಕೆ ಬಂದ ಮಾವಿನ ಮೇಲೆ ಥಂಡಿ ಮಳೆ ಹಿಡಿದರೆ ಕಾಯಿ ಊದಿಕೊಳ್ಳುತ್ತವೆ. ನೀರಿಡಿದು ರುಚಿ ಕಳೆದುಕೊಳ್ಳುತ್ತವೆ. ನೀರು ತುಂಬಿ ಒಂದು ದಿನ ಒಡೆದು ಹೋಗುತ್ತವೆ. ಈ ವರ್ಷವೂ ಅಷ್ಟೆ. ಚೆನ್ನಾಗಿ ಬಲಿತು ಬಣ್ಣ ತಳೆದು ಫಳಗುಡುವ ಕಾಯಿಗಳ ಮೇಲೆ ನಿರಂತರ ಮಳೆ ಹಿಡಿದರೆ ಪಾಚಿ ಕಟ್ಟುತ್ತವೆ. ಕರಾವಳಿಯ ಮಾವುಗಳನ್ನು ನೋಡಿದರೆ ಇದು ಥಟ್ಟನೆ ಗೋಚರಿಸುತ್ತದೆ. ಭೂಮಿಯಲ್ಲಿ ಹೆಚ್ಚು ತೇವವಿದ್ದರೆ ಹಣ್ಣುಗಳಿಗೆ ರುಚಿ ಇರುವುದಿಲ್ಲ. ಬಿಸಿಲು ಮುಗಿಲಿನಿಂದ ಸುರಿದು ಬೆವರು ಬಸಿದು ಹೋದ ಭೂಮಿಯಲ್ಲಿ ಬೆಳೆವ ಹಣ್ಣುಗಳು ಹುಳಿಯಾಗುತ್ತವೆ, ಸಪ್ಪೆಯಾಗುತ್ತವೆ. ಹೆಚ್ಚು ದಿನ ಬಾಳಿಕೆ ಬರುವುದಿಲ್ಲ.

ನಿಸರ್ಗದ ಕುಣಿತದಲ್ಲಿ ನಡೆಯುತ್ತಿರುವ ಬದಲಾವಣೆಗಳ ಫಲವನ್ನು ಸ್ವತಃ ನಾನೆ ಈ ವರ್ಷ ಅನುಭವಿಸಿದ್ದೇನೆ. ಸಣ್ಣವರಾಗಿದ್ದಾಗ ನಮ್ಮ ದೊಡ್ಡ ಆಸೆ: ಆಷಾಢ, ಶ್ರಾವಣದಲ್ಲೂ ಅಪರೂಪಕ್ಕೆ ಮಾವಿನ ಹಣ್ಣು ಸಿಕ್ಕರೆ ಎಷ್ಟು ಚೆಂದ ಅನ್ನಿಸುತ್ತಿತ್ತು. ಕೆಲವೊಮ್ಮೆ ರಾಗಿ ಹೊಲದಲ್ಲಿ ಕುಂಟೆ ಹೊಡೆಯುವಾಗ, ಕಳೆ ಕೀಳುವಾಗ ಹಕ್ಕಿಗಳು ಹಣ್ಣು ಉದುರಿಸಿದ್ದವು ಎಂದು ಓರಗೆಯವರು ಹೇಳಿದರೆ ವಿಪರೀತ ಅಸೂಯೆಯಾಗುತ್ತಿತ್ತು. ಒಮ್ಮೆ ಮಾತ್ರ ಮಲ್ಲಣ್ಣನ ಮಾವಿನ ತೋಪಿನ ಬಾದಾಮಿ ಮರದಲ್ಲಿ ತಪ್ಪಿಸಿಕೊಂಡಿದ್ದ ಎರಡು ಕಾಯಿಗಳು ಸಿಕ್ಕಾಗ ಎಷ್ಟು ಖುಷಿಯಾಗಿತ್ತೆಂದರೆ ಅದನ್ನು ವಿವರಿಸಲು ಶಬ್ದಗಳು ಸೋತು ಹೋಗುತ್ತವೆ. ಅಪ್ಪನ ಕಾಯಿಲೆ ಅವರ ದಿನಗಳನ್ನು ಬೆರಳೆಣಿಕೆಯಷ್ಟು ಹತ್ತಿರ ತರುತ್ತಿತ್ತೆಂದು ಆಗ ಗೊತ್ತಿರಲಿಲ್ಲ. ಅದಾದ ತಿಂಗಳಿಗೇನೊ ಅವರು ಎದ್ದು ನಡೆದು ಹೋದರು. ಅದಾದ ಮೇಲೆ ಈ ವರ್ಷವೆ ಹಣ್ಣುಗಳು ಆಷಾಢದವರೆಗೆ ಉಳಿದಿದ್ದವು. ಬಾಲ್ಯದಲ್ಲಿ ಯಾವ ಕನಸಿತ್ತು. ಅದು ಈ ವರ್ಷ ನಿಜವಾಗಿದೆ. ಆದರೆ, ತಡವಾದ ಮಾವು ಭೂಮಿಗೆ ಬರಲಿರುವ ಯಾವುದೊ ಗಂಡಾಂತರದ ಸೂಚನೆ ನೀಡುತ್ತಿದೆ ಎನ್ನಿಸುತ್ತದೆ. ದಿನ ದಿನವೂ ಭೂಮಿಯ ಎದೆ ಥವಗುಡುವಿಕೆ ತೀವ್ರವಾಗುತ್ತಿದೆ. ಭೂಮಿ ಲಯ ತಪ್ಪಿರುವುದನ್ನು ಈ ವರ್ಷದ ಮಾವು ಹಾದಿ ತಪ್ಪಿ ನುಡಿಯುತ್ತಿದೆ. ಇದನ್ನು ಬುದ್ಧಿವಂತನೆಂಬ ಕಲ್ಲು ಕೋಡಿನ ಮನುಷ್ಯ ಬೇಗ ಅರಿಯಬೇಕು. ಅರಿಯದಿದ್ದರೆ ಮನುಷ್ಯರ ಭೂಮಿಯ ಎದೆ ಒಡೆವ ದಿನ ದೂರವಿಲ್ಲ.

●